## ಕರ್ನಾಟಕ ವಿಧಾನ ಪರಿಷತ್ತು

**ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** : 1693(1897)

**ಸದಸ್ಯರ ಹೆಸರು** : ಶ್ರೀ ಮಂಜುನಾಥ್ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)

**ಉತ್ತರಿಸಬೇಕಾದ ದಿನಾಂಕ** : 24.03.2026

**ಉತ್ತರಿಸುವವರು** : ಪೌರಾಡಳಿತ ಮತ್ತು ಹಜ್ ಸಚಿವರು

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಪೌರಾಡಳಿತ ಸಂಸ್ಥೆಗಳ ವ್ಯಾಪ್ತಿಯಲ್ಲಿ ಆಟೋ ರಿಕ್ಷಾ ಹಾಗೂ ಟ್ಯಾಕ್ಸಿ ಹಾಗೂ ಇತರ ಯಾವುದೇ ವಾಹನಗಳ ಅಧಿಕೃತ ನಿಲ್ದಾಣಗಳನ್ನು ಸ್ಥಾಪಿಸಲು ಸರ್ಕಾರ ರೂಪಿಸಿರುವ ಮಾರ್ಗಸೂಚಿಗಳಾವುವು; ಅವುಗಳನ್ನು ಯಾವಾಗ ರಚಿಸಲಾಗಿತ್ತು; | ಯಾವುದೇ ಮಾರ್ಗಸೂಚಿಗಳು ಇರುವುದಿಲ್ಲ. |
| ಆ) | ಪೌರಾಡಳಿತಗಳ ವ್ಯಾಪ್ತಿಯಲ್ಲಿ ಹೊಸದಾಗಿ ಆಟೋ ರಿಕ್ಷಾ ಹಾಗೂ ಟ್ಯಾಕ್ಸಿ ವಾಹನಗಳನ್ನು ಖರೀದಿಸಲು ನಿಲ್ದಾಣ ಲಭ್ಯತಾ ಪ್ರಮಾಣ ಪತ್ರ (Stand Availability Certificate) ನೀಡುವ ವಿಧಾನ ಯಾವುದು; ಈ ಪ್ರಮಾಣ ಪತ್ರ ನೀಡುವಾಗ ಅನುಸರಿಸಲಾಗುತ್ತಿರುವ ಸ್ಥಳದ ಸಾಮರ್ಥ್ಯ, ಸಂಚಾರ ದಟ್ಟಣೆ, ಸಾರ್ವಜನಿಕ ಬೇಡಿಕೆ, ದೂರಮಾನ ಇತ್ಯಾದಿಗಳ ಪೈಕಿ ಯಾವ ಅಂಶಗಳಿಗೆ ಎಷ್ಟು ಆದ್ಯತೆ ನೀಡಲಾಗುತ್ತಿದೆ; | ಹೊಸದಾಗಿ ರಿಕ್ಷಾ ಹಾಗೂ ಟ್ಯಾಕ್ಸಿ ವಾಹನಗಳನ್ನು ಖರೀದಿಸಲು ನಿಲ್ದಾಣ ಲಭ್ಯತಾ ಪ್ರಮಾಣ ಪತ್ರವನ್ನು ನೀಡಲಾಗುತ್ತಿಲ್ಲ. |
| ಇ) | ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳ ಪೌರಾಡಳಿತ ಸಂಸ್ಥೆಗಳ ವ್ಯಾಪ್ತಿಯಲ್ಲಿ ಅನಧಿಕೃತ ಆಟೋ ರಿಕ್ಷಾ ಹಾಗೂ ಟ್ಯಾಕ್ಸಿ ನಿಲ್ದಾಣಗಳು ಹೆಚ್ಚುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದರೆ, ಕಳೆದ ಮೂರು ವರ್ಷಗಳಲ್ಲಿ ಸಂಸ್ಥೆವಾರು ಪತ್ತೆಯಾದ ಅನಧಿಕೃತ ನಿಲ್ದಾಣಗಳೆಷ್ಟು; ಅವುಗಳನ್ನು ಸೂಕ್ತ ಕ್ರಮಗಳ ಮೂಲಕ ಅಧೀಕೃತಗೊಳಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳ ವಿವರವೇನು; | ಬಂದಿದೆ.<br><br>ದಕ್ಷಿಣ ಕನ್ನಡ ಜಿಲ್ಲೆಯ 13 ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಒಟ್ಟು 68 ಅನಧಿಕೃತ ರಿಕ್ಷಾ ನಿಲ್ದಾಣಗಳು ಹಾಗೂ 2 ಅನಧಿಕೃತ ಟ್ಯಾಕ್ಸಿ ನಿಲ್ದಾಣಗಳಿರುತ್ತವೆ.<br><br>ಉಡುಪಿ ಜಿಲ್ಲೆಯ ವ್ಯಾಪ್ತಿಯಲ್ಲಿ ಒಟ್ಟು 44 ಅನಧಿಕೃತ ರಿಕ್ಷಾ ನಿಲ್ದಾಣಗಳಿದ್ದು, ಯಾವುದೇ ಅನಧಿಕೃತ ಟ್ಯಾಕ್ಸಿ ನಿಲ್ದಾಣಗಳಿರುವುದಿಲ್ಲ. |
| ಈ) | ಅನಧಿಕೃತ ವಾಹನ ನಿಲ್ದಾಣಗಳಿಂದ ಸಾರ್ವಜನಿಕರಿಗೆ ಉಂಟಾಗುತ್ತಿರುವ ಸಂಚಾರ ದಟ್ಟಣೆ, ಪಾರ್ಕಿಂಗ್ ಸಮಸ್ಯೆಗಳ ನಿವಾರಣೆಗೆ ಪೌರಾಡಳಿತ ಸಂಸ್ಥೆಗಳ ಸಂಬಂಧಪಟ್ಟ ಇಲಾಖೆಗಳೊಂದಿಗೆ ಸಮನ್ವಯದ ಮೂಲಕ ಕೈಗೊಂಡಿರುವ ಕ್ರಮಗಳೇನು; | ರಿಕ್ಷಾ ನಿಲ್ದಾಣಗಳ ಬೇಡಿಕೆ ಅನುಸರಿಸಿ ನಗರ ಸ್ಥಳೀಯ ಸಂಸ್ಥೆ, ಪೋಲೀಸ್ ಇಲಾಖೆ ಹಾಗೂ ಪ್ರಾದೇಶಿಕ ಸಾರಿಗೆ ಇಲಾಖೆಯ ಜಂಟಿ ಸಮೀಕ್ಷೆ ನಡೆಸಿ ಅಭಿಪ್ರಾಯದೊಂದಿಗೆ ಜಿಲ್ಲಾ ರಸ್ತೆ ಸುರಕ್ಷಾ ಸಮಿತಿಯಲ್ಲಿ ಮಂಡಿಸಿ ನಿರ್ಣಯ ಕೈಗೊಂಡು, ವಾಹನ ನಿಲ್ದಾಣಗಳನ್ನು ಗುರುತಿಸಲು ಹಾಗೂ ಸಂಚಾರ ದಟ್ಟಣೆ, ಪಾರ್ಕಿಂಗ್ ಸಮಸ್ಯೆಗಳ ನಿವಾರಣೆಗೆ ಕ್ರಮ ವಹಿಸಲಾಗುತ್ತಿದೆ. ಆದರೂ ಅನಧಿಕೃತ ವಾಹನ ನಿಲ್ದಾಣ ಕಂಡುಬಂದಲ್ಲಿ ಕರ್ನಾಟಕ ಪುರಸಭಾ ಕಾಯ್ದೆ 1964 ರಂತೆ ಕ್ರಮ ಕೈಗೊಳ್ಳಲಾಗುತ್ತದೆ. |

| | | |
|---|---|---|
| ಊ) | ಸಾರ್ವಜನಿಕ ಹಿತದೃಷ್ಟಿಯಿಂದ ರಾಜ್ಯವ್ಯಾಪ್ತಿ ಏಕೀಕೃತ ವಾಹನ ನಿಲುಗಡೆ ಮಾರ್ಗಸೂಚಿ ರೂಪಿಸಿ, ಅಧಿಕೃತ ನಿಲ್ದಾಣಗಳ ಗುರುತುಪಡಿಸುವಿಕೆ, ಸೂಚನಾ ಫಲಕ ಅಳವಡಿಕೆ, GPS ಆಧಾರಿತ ನಿಯಂತ್ರಣ ಹಾಗೂ ನಿಯಮ ಉಲ್ಲಂಘನೆಗೆ ದಂಡ ವಿಧಿಸುವ ವ್ಯವಸ್ಥೆ ಜಾರಿಗೆ ತರಲು ಸರ್ಕಾರ ಉದ್ದೇಶಿಸಿರುವುದೇ; ಅದನ್ನು ಯಾವ ಕಾಲಮಿತಿಯಲ್ಲಿ ಅನುಷ್ಠಾನಿಸಲಾಗುವುದು? | ಸರ್ಕಾರಕ್ಕೆ ಯಾವುದೇ ಪ್ರಸ್ತಾವನೆ ಸ್ವೀಕೃತವಾಗಿರುವುದಿಲ್ಲ. |

**ಸಂಖ್ಯೆ: ನಅಇ 122 ಜಿಇಎಲ್ 2026 (ಇ)**

(ರಹೀಂ ಖಾನ್)
ಪೌರಾಡಳಿತ ಮತ್ತು ಹಜ್ ಸಚಿವರು